ದಿನಾಂಕಃ 20-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ವಾದಿ ಪರವಾಗಿ ಶ್ರೀ.ಜಿ.ಬಿ.ಎಚ್. ವಕೀಲರಿಂದಃ-**

ನಾವು ಇಬ್ಬರು ಅಣ್ಣ ತಮ್ಮಂದಿರು. ನಾನು ಮತ್ತು ನನ್ನ ಅಣ್ಣ 1975 ರಲ್ಲಿ ವಿಭಾಗ ಮಾಡಿಕೊಂಡಿದ್ದೇವೆ. ಈ ವಿಭಾಗಕ್ಕೆ ಸಂಬಂಧಿಸಿದಂತೆ ಪಂಚಾಯತ್ ಪಾರಿಕತ್ ಮಾಡಿಕೊಂಡಿದ್ದೇವೆ. ಸದರಿ ಪಾರಿಕತ್ ನಮ್ಮ ಅಣ್ಣನ ಹತ್ತಿರ ಇತ್ತು. ನನ್ನ ಹತ್ತಿರ ಅದರ ಪ್ರತಿ ಇಲ್ಲ ಆದರೆ ಪಹಣಿ ಇದೆ. ಯಾವ ಯಾವ ಸರ್ವೆ ನಂಬರ್ ಗಳ ಪಹಣಿ ಇದೆ ಎಂದರೆ ನೆನಪಿಲ್ಲ. ಯಾರು ಯಾರಿಗೆ ಎಷ್ಟು ಎಷ್ಟು ಸರ್ವೆ ನಂಬರ್ ಗಳ ಆಸ್ತಿ ಹೋಗಿದೆ ಎಂದು ಬರೆದುಕೊಂಡಿದ್ದೀರಾ ಎಂದರೆ ಇಲ್ಲ. ದಾವಾ ಐಟಂ ನಂಬರ್ 1 ರ ಆಸ್ತಿಯನ್ನು ನಾವು ಹಂಚಿಕೊಂಡಿದ್ದೇವೆ ಎಂದರೆ ಸರಿ. ಸದರಿ ಸರ್ವೆ ನಂಬರ್ 3 ರಲ್ಲಿ ಒಬ್ಬೊಬ್ಬರಿಗೆ ಒಂದು ಎಕರೆ ಚಿಲ್ಲರೆ ಹಿಸ್ಸೆ ಬಂದಿದೆ. ನನ್ನ ಮತ್ತು ನನ್ನ ಅಣ್ಣನ ಹಿಸ್ಸೆಗೆ ತಲಾ 1 ಎಕರೆ 15 ಗುಂಟೆ ಬಂದಿದೆ ಎಂದರೆ ಸರಿ. ವಿಭಾಗದ ಪ್ರಕಾರ ನಮ್ಮಿಬ್ಬರ ಹೆಸರಿಗೆ ತಲಾ 1 ಎಕರೆ 15 ಗುಂಟೆ ವಿಸ್ತೀರ್ಣಕ್ಕೆ ಖಾತೆ ಪಹಣಿಯಾಗಿದೆ ಎಂದರೆ ಸರಿ.

ನನ್ನ ತಾತನ ಹೆಸರು ರೇವಣ್ಣ. ದಾವಾ ಐಟಂ ನಂಬರ್ 1 ರಲ್ಲಿ ನಮೂದಿಸಿದ ಸರ್ವೆ ನಂಬರ್ 3 ರ ಆಸ್ತಿಯು ನನ್ನ ತಾತ ಮತ್ತು ತಂದೆಯಿಂದ ಬಂದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಯಾರ ಕಡೆಯಿಂದ ಖರೀದಿ ಮಾಡಿದ್ದೀರಾ ಎಂದರೆ

ಹೇಳಲು ಆಗುವುದಿಲ್ಲ. ಅದೇ ರೀತಿ ಸದರಿ ಆಸ್ತಿಯನ್ನು ಯಾರಿಂದ ಎಷ್ಟು ಮೊತ್ತಕ್ಕೆ ಕೊಂಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಅದಕ್ಕೆ ಸಂಬಂಧಿಸಿದ ಕ್ರಯ ಪತ್ರ ಇಲ್ಲ ನಾನು ಖರೀದಿ ಮಾಡಿದ ಜಮೀನುಗಳಿಗೆಲ್ಲಾ ಕ್ರಯ ಪತ್ರ ಬರೆಸಿಕೊಂಡು ನೋಂದಣಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ನನ್ನ ಹತ್ತಿರ ಕ್ರಯ ಪತ್ರ ಇಲ್ಲದೆ ಇದ್ದರೆ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಅದರ ದೃಢೀಕೃತ ನಕಲನ್ನು ಪಡೆಯಬಹುದು ಎಂದರೆ ಸರಿ. ಸರ್ವೆ ನಂಬರ್ 3 ಕ್ಕೆ ಸಂಬಂಧಿಸಿದ ಕ್ರಯ ಪತ್ರದ ದೃಢೀಕೃತ ನಕಲನ್ನು ಸಬ್ ರಿಜಿಸ್ಟರ್ ಕಚೇರಿಯಿಂದ ತೆಗೆದುಕೊಂಡು ಬಂದು ಹಾಜರುಪಡಿಸಬಹುದಾ? ಎಂದರೆ ನೋಡುತ್ತೇನೆ ಎಂದು ಹೇಳುತ್ತಾರೆ.

ದಾವಾ ಐಟಂ ನಂಬರ್ 1 ರಲ್ಲಿ ದೊಡ್ಡ ಕಲ್ಲು ಕಟ್ಟೆಯ ಬಾವಿ ಇದೆ ಎಂದರೆ ಸರಿ. ಅದಕ್ಕೆ ಪಂಪ್‌ಸೆಟ್ ಹಾಕಿಸಲಾಗಿತ್ತು ಎಂದರೆ ಹೌದು. ಆದರೆ ಈಗ ಇಲ್ಲ. ಸದರಿ ಪಂಪ್ ಸೆಟ್ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಆದರೆ ನನ್ನ ಹೆಸರಿನಲ್ಲಿತ್ತು. ಈ ಬಗ್ಗೆ ವಿದ್ಯುತ್ ಕಚೇರಿಯಲ್ಲಿ ರಸೀದಿ ಸಿಗುತ್ತದೆ ಎಂದರೆ ಗೊತ್ತಿಲ್ಲ. ವಿದ್ಯುತ್ ಹಾಕಿಸಿ ಸುಮಾರು 50 ವರ್ಷದ ಮೇಲಾಗಿರುವ ಕಾರಣ ಸದರಿ ಪಂಪ್ ಸೆಟ್ ಗೆ ಸೇರಿದ ದಾಖಲಾತಿ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ನನ್ನ ತಾತ ಮೃತ ಪಟ್ಟು ಎಷ್ಟು ವರ್ಷವಾಗಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಮೃತ ಪಟ್ಟು 20 ವರ್ಷಕ್ಕಿಂತ ಜಾಸ್ತಿ ಆಗಿದೆ. ನನ್ನ ತಂದೆ ಬದುಕಿರುವ ತನಕ ಕುಟುಂಬದ

ಯಜಮಾನಿಕೆ ಅವರೇ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ಮೃತ ಪಟ್ಟ ನಂತರ ನಾನೇ ಯಜಮಾನಿಕೆ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಆದರೆ ಗಂಗಮ್ಮಜ್ಜಿ ಯಜಮಾನಿಕೆ ಮಾಡುತ್ತಿದ್ದರು. ಗಂಗಮ್ಮಜ್ಜಿ ಮೃತ ಪಟ್ಟು ಎಷ್ಟು ವರ್ಷವಾಗಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆಯನ್ನು ನಾನು ನೋಡೇ ಇಲ್ಲ. ನಾನು 10 ನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ ಅಷ್ಟರಲ್ಲಿ ನನ್ನ ತಂದೆ ಮೃತ ಪಟ್ಟಿದ್ದರು.

ದಾವಾ ಐಟಂ ನಂಬರ್ 1 ರಲ್ಲಿರುವ ಪಂಪ್ ರೂಮ್ ಹಾಗೆ ಇದೆ ಎಂದರೆ ಸರಿಯಲ್ಲ. ಬಿದ್ದು ಹೋಗಿದೆ. ಸದರಿ ಜಮೀನಿನಲ್ಲಿ 2-3 ಪಂಪ್ ಹಾಕಿದ್ದೆವು. 3 ಬೋರ್ ವೆಲ್ ಗೆ 5 ಎಚ್.ಪಿ. ಪಂಪ್ ಸೆಟ್ ಹಾಗೂ ಬಾವಿಗೆ 3 ಎಚ್.ಪಿ. ಪಂಪ್ ಸೆಟ್ ಹಾಕಿದ್ದೆವು. ನಾನು ಪ್ರೌಢಶಿಕ್ಷಣ ಓದುವಾಗ ಮಳೆಯು ಚೆನ್ನಾಗಿ ಬರುತ್ತಿತ್ತು 3 ಎಚ್.ಪಿ. ಬಾವಿಯಲ್ಲಿ ವರ್ಷ ಪೂರ್ತಿ ಸಂಮೃದ್ದಿಯಾಗಿ ನೀರು ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಾವಿ ತೆಗೆದಾಗಿನಿಂದ ನೀರು ಬಂದಿರಲಿಲ್ಲ ಎಂದು ಹೇಳುತ್ತಾರೆ. ಬಾವಿಯ 5 ಮಟ್ಟು (ಒಂದು ಮಟ್ಟು=5 ಅಡಿ) ಕಲ್ಲು ಕಟ್ಟು ಇದೆ. ಬಾವಿ ತೆಗೆದಾಗ ನೀರು ಬಂದರೆ ಮಾತ್ರ ಕಲ್ಲು ಕಟ್ಟುತ್ತಾರೆ ಎಂದರೆ ಸರಿಯಲ್ಲ. ಆದರೆ ಮಳೆ ಬಂದರೆ ನೀರು ಹರಿದುಹೋಗುತ್ತದೆ ಎಂದು ಕಲ್ಲು ಕಟ್ಟಿದ್ದೆವು.

ದಾವಾ ಐಟಂ ನಂಬರ್ 1 ರಲ್ಲಿ 2-3 ಹುಣಸೆ ಮರಗಳಿವೆ. ಅದರಲ್ಲಿ ನಾಲ್ಕು ಹುಣಸೆ ಮರಗಳು ಇವೆ ಎಂದರೆ ಸರಿಯಲ್ಲ. 1 ನೇರಳೆ ಮರ ಇದೆ ಎಂದರೆ ಸರಿಯಲ್ಲ. 150 ತೆಂಗಿನ ಮರಗಳು ಇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ತುಂಬಾ ಸಂಮೃದ್ದಿ ಜಮೀನಾಗಿದ್ದು ಅದರಲ್ಲಿ ಕಬ್ಬು ಬೆಳೆಯುತ್ತಿದ್ದರು ಎಂದರೆ ಸಾಕ್ಷಿಯು ಶುಗರ್ ಫ್ಯಾಕ್ಟರಿ ಇದ್ದಾಗ ನನ್ನ ತಂದೆ ಬೆಳೆಯುತ್ತಿದ್ದರು ಎಂದು ಹೇಳುತ್ತಾರೆ. 1965 ರಲ್ಲಿ ಗೌರಿಬಿದನೂರಿನಲ್ಲಿ ಶುಗರ್ ಫ್ಯಾಕ್ಟರಿ ಪ್ರಾರಂಭವಾಯಿತು ಎಂದರೆ ಗೊತ್ತಿಲ್ಲ.

ದಾವಾ ಐಟಂ ನಂಬರ್ 11 ರಲ್ಲಿರುವ ಸರ್ವೆ ನಂಬರ್ 101/3 ರ ಚೆಕ್ಕುಬಂಧಿ ಗೊತ್ತಿಲ್ಲ. ಅದರಲ್ಲಿ ಅಡಿಕೆ ತೋಟ ಇದೆ ಎಂದರೆ ಸರಿಯಲ್ಲ. ಅದನ್ನು ನಾನೇ ಕ್ರಯಕ್ಕೆ ಕೊಂಡಿದ್ದೇನೆ . ಅದನ್ನು ಯಾರಿಂದ ಯಾವಾಗ ಎಷ್ಟು ಹಣಕ್ಕೆ ಕೊಂಡಿದ್ದೇನೆ ಎಂದರೆ ನೆನಪಿಲ್ಲ. ಆದರೆ 50 ವರ್ಷದ ಹಿಂದೆ ಕೊಂಡಿದ್ದೇನೆ. ಅದರ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನೆನಪಿಲ್ಲ. ಈ ಆಸ್ತಿ ಕೂಡ ನನ್ನ ತಾತನ ಕಾಲದಿಂದ ಬಂದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಯಾವುದೇ ಬೋರ್ ವೆಲ್ ಇಲ್ಲ. ಅದರಲ್ಲಿ ಕೇವಲ ಚಿಗರೆ ಮರಗಳು ಇವೆ. ಸರ್ವೆ ನಂಬರ್ 3 ರಲ್ಲಿ ಕಬ್ಬು ಬೆಳೆಸುವುದನ್ನು ನಿಲ್ಲಿಸಿದ ನಂತರ ಅಡಿಕೆ ತೋಟ ಬೆಳೆಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಕಬ್ಬು ಬೆಳೆಯುವುದನ್ನು ನಿಲ್ಲಿಸಿದ

ನಂತರ ಮುಸುಕಿನ ಜೋಳ ಬೆಳೆಯುತ್ತಿದ್ದೆವು. ನಿಮಗೆ ವ್ಯವಸಾಯ ಮಾಡಲು ಮಕ್ಕಳು ಸಹಕಾರ ಮಾಡುತ್ತಾರಾ ಎಂದರೆ ಇಲ್ಲ. ನಾನು ಚಿಕ್ಕ ವಯಸ್ಸಿನಿಂದ ವ್ಯವಸಾಯ ಮಾಡಲು ಎತ್ತು ದನ ಕರಗಳನ್ನು ಕಟ್ಟಿಕೊಂಡಿರುವುದಿಲ್ಲ.

ನಾನು ಮತ್ತು ನನ್ನ ಅಣ್ಣ ಭಾಗ ಮಾಡಿಕೊಂಡ ನಂತರ ನನ್ನ ಮನೆಯ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ವ್ಯವಸಾಯದ ಆದಾಯವನ್ನು ಯಾವ ಬ್ಯಾಂಕಿನಲ್ಲಿ ಇಡುತ್ತಿರಾ ಎಂದರೆ ಸಾಕ್ಷಿಯು ಯಾವುದೇ ಬ್ಯಾಂಕಿನಲ್ಲಿ ಇಡುವುದಿಲ್ಲ ಎಂದು ಹೇಳುತ್ತಾರೆ. ಪುರವರ ಎಸ್.ಬಿ.ಐ. ಬ್ಯಾಂಕಿನಲ್ಲಿ ನನ್ನ ಖಾತೆ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 11ರ ಆಸ್ತಿಗಳು ತುಂಬಾ ಸಂಮೃದ್ದಿಯಾದ ಜಮೀನು ಹಾಗೂ ಉತ್ಕೃಷ್ಟವಾದ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಿಂದ ಬಂದ ಆದಾಯದಿಂದಉಳಿದ ಆಸ್ತಿಗಳನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಕಾಲದಿಂದಲೂ ನನಗೆ ವ್ಯವಸಾಯ ನನ್ನ ಮುಖ್ಯ ಕಸುಬು ಎಂದರೆ ಸರಿಯಲ್ಲ. ನಾನು ವ್ಯಾಪಾರ ಕೂಡ ಮಾಡುತ್ತಿದ್ದೆನು.

ಯಾವ ಯಾವ ಆಸ್ತಿಯನ್ನು ನಾನು ದಾನ ಮಾಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ಚೆನ್ನಾಗಿದ್ದೇವೆ. ವಾದಿಯನ್ನು ಮದುವೆ ಮಾಡಿಕೊಟ್ಟಿದ್ದೇವೆ. ಈಗ ಅವಳು ಗಂಡನ ಮನೆಯಲ್ಲಿದ್ದಾಳೆ ಎಂದರೆ ಸರಿ. ನಾನು

ವ್ಯಾಪಾರ ಮಾಡುತ್ತಿದ್ದೆನು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಾನು ಅಡಿಕೆ ಮತ್ತು ತೆಂಗಿನ ಕಾಯಿ ವ್ಯಾಪಾರ ಮಾಡುತ್ತಿದ್ದೆನು. ಯಾವ ಯಾವ ವರ್ಷ ಎಷ್ಟು ಎಷ್ಟು ವ್ಯಾಪಾರ ಮಾಡುತ್ತಿದ್ದೆನು ಎಂದು ಹೇಳಲು ಆಗುವುದಿಲ್ಲ. ನಾನು ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ ಹಾಗೂ ನನಗೆ ವ್ಯವಸಾಯ ಬಿಟ್ಟರೆ ಬೇರೆ ಕಸುಬು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವ್ಯಾಪಾರದಿಂದ ಯಾವ ಯಾವ ವರ್ಷ ಎಷ್ಟು ಎಷ್ಟು ಹಣ ಬಂತು ಹೇಳಲು ಆಗುವುದಿಲ್ಲ. ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯವನ್ನು ಹೊರತುಪಡಿಸಿದರೆ ನನಗೆ ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮನೆಯ ಯಜಮಾನನಾಗಿದ್ದು ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ಇತರೆ ಜಮೀನುಗಳನ್ನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಸ್ವಯಾರ್ಜಿತ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

ಇದುವರೆಗೂ ನಾನು ಮತ್ತು ನನ್ನ ಮಕ್ಕಳು ಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಆದರೆ ಎಲ್ಲಾ ಆಸ್ತಿಗಳನ್ನು ನಾನು ದಾನ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ಇಬ್ಬರು ಗಂಡು ಮಕ್ಕಳಿಗೆ ಹಾಗೂ ಸೊಸೆಯಂದಿರುಗೆ ದಾನ ಮಾಡಿದ್ದೇನೆ. ವಾದಿಗೆ ಯಾವುದೇ ಆಸ್ತಿಯನ್ನು ದಾನ ಮಾಡಿಲ್ಲ ಎಂದರೆ ಸರಿ. ಆದರೆ ಅವಳಿಗೆ ಮದುವೆ ಸಮಯದಲ್ಲಿ ಒಡವೆ ವಸ್ತ್ರ ಕೊಟ್ಟಿದ್ದೇನೆ. ದಾನ ಪತ್ರಗಳನ್ನು ಮಾಡಿ 7-8

ವರ್ಷಗಳಾಗಿದೆ. ವಾದಿಯು ಗಂಡನ ಮನೆಯಲ್ಲಿದ್ದಾಳೆ ಎಂಬ ಕಾರಣಕ್ಕೆ ಅವಳಿಗೆ ದಾವಾ ಆಸ್ತಿಯ ಆದಾಯ ತೋರಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವಳು ಕೇಳಬೇಕಾಗಿತ್ತು ಎಂದು ಹೇಳುತ್ತಾರೆ. ನಮ್ಮ ಹತ್ತಿರ ಈಗ ಟ್ರ್ಯಾಕ್ಟರ್ ಇದೆ ಎಂದರೆ ಸರಿಯಲ್ಲ. ಭೈರೇನಹಳ್ಳಿಯಲ್ಲಿ ನಿವೇಶನ ಖರೀದಿಸಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿರುವ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಮಗಳಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ದಾವಾ ಆಸ್ತಿಗಳನ್ನು ನನ್ನ ಗಂಡು ಮಕ್ಕಳು ಹಾಗೂ ಸೊಸೆಯಂದಿರ ಹೆಸರಿಗೆ ದಾನ ಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ದಾನ ಪತ್ರ ಬರೆಯಲು ನನಗಾಗಲಿ ನನ್ನ ಹೆಂಡತಿಗಾಗಲಿ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನನ್ನ ಹೆಂಡತಿ ಮನೆಯಲ್ಲೇ ಕೆಲಸ ಮಾಡಿಕೊಂಡು ಇರುತ್ತಾಳೆ ಎಂದರೆ ಸರಿ. ಅವಳಿಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿ. ನನ್ನ ಹೆಂಡತಿ ಹೆಸರಿಗೆ ಕೆಲವು ಆಸ್ತಿಗಳನ್ನು ಕ್ರಯಕ್ಕೆ ಕೊಂಡಿದ್ದೇನೆ ಎಂದರೆ ಸರಿ . ಒಟ್ಟು ಕುಟುಂಬದ ಆಸ್ತಿಗಳಿಂದ ಬಂದ ಆದಾಯದಿಂದಲೇ ನನ್ನ ಹೆಂಡತಿ ಹೆಸರಿಗೆ ಆಸ್ತಿ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೇವಲ ಗಂಡು ಮಕ್ಕಳ ಮೇಲೆ ಒಲವು ಇದೆ ಎಂದರೆ ಸರಿಯಲ್ಲ. ಹೆಣ್ಣು ಮಗಳು ಹಿಸ್ಸೆ ದಾವಾ ಹಾಕಿದರೆ ಅವಳಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ದಾವಾ ಆಸ್ತಿಗಳೆಲ್ಲಾ ನನ್ನ ಸ್ವಯಾರ್ಜಿತ

ಆಸ್ತಿಗಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರು ವಿದ್ಯಾವಂತರು ಎಂದರೆ ಸರಿ. ಅವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಿನ ನಾನೇ ಕೋರ್ಟಿಗೆ ಬಂದಿದ್ದೇನೆ. ನನ್ನ ಮಗ ಇವತ್ತು ಕೋರ್ಟಿಗೆ ಬಂದಿದ್ದಾನೆ ಎಂದರೆ ಏನೋ ಕೆಲಸ ಇರಬಹುದು ಬಂದಿದ್ದಾನೆ. ಅವನ ಕಾರಿನಲ್ಲೇ ಈ ದಿನ ಬಂದಿದ್ದಾನೆ ಎಂದರೆ ಸಾಕ್ಷಿಯು ಅವನ ಗೆಳೆಯನ ಕಾರನ್ನು ತಂದಿದ್ದಾನೆ ಎಂದು ಹೇಳುತ್ತಾರೆ. ಈ ದಾವೆ ಹಾಕುವ ಪೂರ್ವದಲ್ಲಿ ವಾದಿಯು ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿದ್ದರು ಎಂದರೆ ಸರಿಯಲ್ಲ. ಈಗ ಅವಳಿಗೆ ಹಿಸ್ಸೆ ಕೊಡಲು ಏನದಾರೂ ಅಭ್ಯಂತರವಿದೆಯಾ ಎಂದರೆ ಸಾಕ್ಷಿಯು ಅವಳಿಗೆ ಮದುವೆ ಸಮಯದಲ್ಲಿ ಎಲ್ಲಾ ಕೊಟ್ಟು ಮದುವೆ ಮಾಡಿದ್ದೇವೆ ಎಂದು ಹೇಳುತ್ತಾರೆ. ವಾದಿಗೆ ಮದುವೆ ಸಮಯದಲ್ಲಿ ನಾನು ಏನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲಾ ಒಟ್ಟು ಕುಟುಂಬದ ಆಸ್ತಿಗಳಾಗಿದ್ದ ಕಾರಣ ನನಗೂ ನನ್ನ ಹೆಂಡತಿಗೆ ದಾನ ಬರೆಯುವ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಅಡಿಕೆ ತೋಟಗಳು ಒಣಗಿ ಹೋಗಿಲ್ಲ ಎಂದರೆ ಸರಿಯಲ್ಲ. ಅಡಿಕೆ ತೆಂಗು ಮತ್ತು ಹುಣಸೇ ಮರದಿಂದ ನನಗೆ ವರ್ಷಕ್ಕೆ 15 ಲಕ್ಷ ಆದಾಯವಿದೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಹಿಸ್ಸೆ ಕೊಡಬಾರದೆಂಬ ಉದ್ದೇಶದಿಂದ ನಾನು ದಾವಾ ಆಸ್ತಿಗಳೆಲ್ಲಾ ನನ್ನ ಸ್ವಯಾರ್ಜಿತ ಆಸ್ತಿಗಳೆಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲಾ ಕ್ರಯ ಪತ್ರಗಳಲ್ಲಿ ನಮೂದಿಸಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಿಂದ ಬಂದ ಆದಾಯದಿಂದ ಖರೀದಿ ಮಾಡಿದ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾನಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ವಾದಿ ಪ್ರತಿವಾದಿಯರು ಜಂಟಿಯಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ